**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ ಸಿ 689/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 28-03-2024** **ಪಿ.ಡಬ್ಲ್ಯೂ 1**

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ದಿಃ 10.12.2021 ರಂದು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಆರೋಪಿ ಪರ ವಕೀಲರು ವಿನಂತಿಸಿಕೊಂಡಿರುತ್ತಾರೆ. ಅನುಮತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ

ಆರೋಪಿ ದತ್ತಾ ಮೆಹರ್ ವಾಡೆ ಯವರಿಂದ ನನಗೆ ಪರಿಚಯ. ನಮ್ಮ ಮತ್ತು ಆರೋಪಿ ನಡುವೆ ಆದ ಕ್ರಯ ಪತ್ರವನ್ನು ಹೊರಪಡಿಸಲು ನಾನು ನನ್ನ ಗಂಡ ಮತ್ತು ನನ್ನ ಅಣ್ಣನ ಮಗ ಆಶೀಶ್ ಬೆಳಗಾವಿಗೆ ಹೋಗಿದ್ದರು. ಸಾಕ್ಷಿಯು ಮುಂದುವರೆದು ದತ್ತ ಮೆಹರ್ ವಾಡೆ ಬೆಳಗಾವಿಯಲ್ಲಿ ಇದ್ದರು. ಸದರಿ ಸಂದರ್ಭದಲ್ಲಿ ಮಾತುಕತೆಯಾಗಿ ಅದರಂತೆ ಆರೋಪಿ ನಮಗೆ 6 ಲಕ್ಷ ರೂಗಳನ್ನು ನೀಡಬೇಕು ಮತ್ತು ಅದರಂತೆ ಕ್ರಯ ಪತ್ರವನ್ನು ರದ್ದು ಮಾಡಬೇಕು ಎಂದು ಒಪ್ಪಂದ ಆಗಿತ್ತು. ನನ್ನ ತಂದೆ ವಕೀಲರು ಎಂದರೆ ಸರಿ. ನನ್ನ ತಂದೆ ಮಾಜಿ ಪುರಸಭೆ ಅಧ್ಯಕ್ಷರು ಎಂದರೆ ಸರಿ. ನನ್ನ ತಂದೆ ಈಗ ಸುಮಾರು 15-20 ವರ್ಷಗಳಿಂದ ಖಾಯಿಲೆಯಿಂದ ಬಳಲುತ್ತಿದ್ದು ಮನೆಯಿಂದ ಹೊರಗೆ ಬರುವುದಿಲ್ಲ ಎಂದರೆ ಸರಿ. ನಿಮ್ಮ ತಂದೆಯವರಿಗೆ ಶೇವಿಂಗ್ ಮಾಡಲು ಒಬ್ಬ ವ್ಯಕ್ತಿ ಬರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನನ್ನ ತಂದೆ ನನ್ನೊಂದಿಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಶ್ರೀಕಾಂತ್ ಬಿ ಜಿ ಎನ್ನುವವರು ನಮ್ಮ ತಂದೆಗೆ ಶೇವಿಂಗ್ ಮಾಡಲು ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಳಗಾವಿಯಲ್ಲಿ ಮಾತುಕತೆಯಾದ ಸಂದರ್ಭದಲ್ಲಿ ಆರೋಪಿಯು ನಮಗೆ 2 ಖಾಲಿ ಚೆಕ್ಕುಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಆರೋಪಿ 1 ಚೆಕ್ ನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ದತ್ತ ಮೆಹರ್ ವಾಡೆ ಅವರನ್ನು ಸಾಕ್ಷಿ ಮಾಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ದತ್ತ ಮೆಹರ್ ವಾಡೆಯವರು ಆರೋಪಿ ಮತ್ತು ಅವರು ಸ್ನೇಹಿತರಾಗಿದ್ದರಿಂದ ಸಾಕ್ಷಿ ನುಡಿಯಲು ಬರಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ ಎಂದು ನುಡಿಯುತ್ತಾರೆ.

ದಿಃ 10.09.2014 ರಂದು ಆದ ಕ್ರಯಪತ್ರದ ಪೂರ್ವದಲ್ಲಿ ನಮ್ಮ ಮತ್ತು ಆರೋಪಿಯ ನಡುವೆ ಕ್ರಯದ ಕರಾರು ಪತ್ರ ಆಗಿತ್ತು ಎಂದರೆ ನೆನಪಿಲ್ಲ. ನಮ್ಮ ಮತ್ತು ಆರೋಪಿಯ ನಡುವೆ ಆದ ಕ್ರಯದ ಪತ್ರ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ನನ್ನ ಪಿರ್ಯಾದಿಯಲ್ಲಿ, ನೋಟಿಸಿನಲ್ಲಿ ಹೇಳಿದ ಪ್ರಕಾರ ಆರೋಪಿಯಿಂದ ಆಸ್ತಿಯನ್ನು ಖರಿದಿಸಿದ್ದೆವು ಎಂದು

ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಿಪಿ.1 ನ್ನು ಆರೋಪಿ ನನಗೆ ನೀಡಿರುತ್ತಾರೆ. ಸದರಿ ನಿಪಿ.1 ನ್ನು ನಾವು ಆಸ್ತಿ ಬೇಡ ಹಣ ಕೊಡಿ ಎಂದು ಕೇಳಿದ್ದಕ್ಕೆ ನೀಡಿರುತ್ತಾರೆ. ನಿಪಿ.1 ಆರೋಪಿ ''Payment stop'' ಮಾಡಿದ್ದಕ್ಕೆ ಬೌನ್ಸ್ ಆಗಿರುತ್ತದೆ. ದತ್ತ ಮೆಹರ್ ವಾಡೆಯವರು ನಾವು ಪಿರ್ಯಾದಿಗೆ ನೀಡಬೇಕಾದ ಹಣವನ್ನು ನೀಡಿದ್ದೇವೆ. ಪಿರ್ಯಾದಿ ನಾವು ನೀಡಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಫೋನ್ ನಲ್ಲಿ ಮಾತನಾಡಿದ ರೆಕಾರ್ಡಿಂಗ್ ನಮ್ಮ ಹತ್ತಿರ ಇದೆ ಎಂದರೆ ನನಗೆ ಗೊತ್ತಿಲ್ಲ. ದತ್ತ ಮೆಹರ್ ವಾಡೆ ಮತ್ತು ನಾವು ಒಂದೇ ಜನಾಂಗದವರು ಹಾಗೂ ದೂರದ ಸಂಬಂಧಿ ಎಂದರೆ ಸರಿ. ಆರೋಪಿ ಬೇರೆ ಜನಾಂಗದವರು ಎಂದರೆ ಸರಿ. ನನಗೆ ಆರೋಪಿ 6 ಲಕ್ಷ ಹಣ ಕೊಡಬೇಕು ಎಂದು ತೋರಿಸಲು ಚೆಕ್ ನ್ನು ಹೊರತುಪಡಿಸಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ಮತ್ತು ಆರೋಪಿಯ ನಡುವಿನ ವ್ಯವಹಾರ ಮುಗಿದಿದ್ದರೂ ಸಹ ಆರೋಪಿ ಭದ್ರತೆಗಾಗಿ ನೀಡಿದ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಸಂಬಂಧಿಕರು ಹರಿಹರದಲ್ಲಿ ಯಾರೂ ಇಲ್ಲ ಎಂದರೆ ಸರಿ. ನನಗೆ ಬಿಟ್ಟರೆ ಹರಿಹರದಲ್ಲಿ ಬೇರೆ ಯಾರಿಗೂ ಆರೋಪಿ ಚೆಕ್ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡುವುದು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಪಿರ್ಯಾದಿ ಪರ ವಕೀಲರು ಮರುವಿಚಾರಣೆಗೆ ಅನಮತಿ ಕೋರಿದ್ದು, ಅನುಮತಿಸಲಾಯಿತು.

ಕಳೆದ ವಿಚಾರಣೆಯಲ್ಲಿ ಕ್ರಯ ಪತ್ರದ ಮೂಲ ಪ್ರತಿ ನನ್ನ ಹತ್ತಿರ ಇದೆ ಆ ಪ್ರತಿಯನ್ನು ಹಾಜರುಪಡಿಸುತ್ತೇನೆ ಎಂದು ಹೇಳಿರುತ್ತೀರಿ, ಏಕೆ ಹಾಜರುಪಡಿಸಿರುವುದಿಲ್ಲ?

ಸದರಿ ದಾಖಲೆ ನನ್ನ ಹತ್ತಿರ ಇದೆ ಎಂದು ನಾನು ತಿಳಿದುಕೊಂಡಿದ್ದೆನು. ನನಗೆ ಮನೆಗೆ ಹೋದ ನಂತರ ಆ ಬಗ್ಗೆ ನೆನಪಾಗಿದ್ದು ಆರೋಪಿ ನಿಪಿ.1 ನ್ನು ಕೊಡುವ ಸಮಯದಲ್ಲಿ ಸದರಿ ಮೂಲ ಕ್ರಯ ಪತ್ರವನ್ನು ಆರೋಪಿ ಪಡೆದುಕೊಂಡಿರುತ್ತಾರೆ

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ಶ್ರೀ ಕೆ ಎಂ ವಕೀಲರಿಂದಃ

ನಾನು ಮೂಲ ಕ್ರಯ ಪತ್ರವನ್ನು ಆರೋಪಿಗೆ ಕೊಡುವ ಸಮಯದಲ್ಲಿ ದತ್ತಾ ಮೆಹರ್ ವಾಡೆ ಹಾಜರಿದ್ದರು. ಆ ಬಗ್ಗೆ ಲಿಖಿತ ಬರವಣಿಗೆಯನ್ನು ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ.1 ನ್ನು ನೀಡಿದ ಮೇರೆಗೆ ಬೇರೆ ಬರವಣಿಗೆ ಮಾಡಿಕೊಂಡಿಲ್ಲ. ಆ ಸಂದರ್ಭದಲ್ಲಿ ಹಾಜರಿದ್ದ ಸಾಕ್ಷಿಗಳನ್ನಾಗಿ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೇಳಿ ಹೇಳಬೇಕು ಎಂದು ನುಡಿಯುತ್ತಾರೆ. ನನ್ನ ಪಿರ್ಯಾದಿ ಹಾಗೂ ನೋಟೀಸಿನಲ್ಲಿ ಯಾವುದೇ ಸಾಕ್ಷಿದಾರರ ಹೆಸರನ್ನು ತೋರಿಸಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ